# ಬಿತ್ತನೆ ಪ್ರದೇಶಗಳು

ವಾಣಿಜ್ಯ ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಲು ಅಗತ್ಯವಿರುವ ಗೂಡುಗಳನ್ನು ಬೆಳೆಯಲು ಮೈಸೂರು ಬಿತ್ತನೆ ವಲಯ ಮತ್ತು ದ್ವಿತಳಿ ಬಿತ್ತನೆ ವಲಯಗಳು

## ಮೈಸೂರು ಬಿತ್ತನೆ ವಲಯಗಳು

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು, ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು ಮತ್ತು ತುಮಕೂರು ತಾಲ್ಲೂಕಿನ ಹೆಬ್ಬೂರು ಹೋಬಳಿ ಒಳಗೊಂಡ ಪ್ರದೇಶವನ್ನು ಮೈಸೂರು ಬಿತ್ತನೆ ಪ್ರದೇಶವೆಂದು ಅಧಿಸೂಚಿಸಲಾಗಿದೆ. ಇಲ್ಲಿ ಶುದ್ಧ ಮೈಸೂರು ತಳಿ ಬಿತ್ತನೆ ಗೂಡುಗಳನ್ನು ಉತ್ಪಾದಿಸಲಾಗುತ್ತಿದೆ.

ಈ ಬಿತ್ತನೆ ಪ್ರದೇಶದ ರೈತರು ಉತ್ಪಾದಿಸಿದ ಬಿತ್ತನೆ ಗೂಡುಗಳು ಬಿತ್ತನೆಗೆ ಯೋಗ್ಯವಾಗಿದ್ದು ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ಮಾರಾಟದ ಸಂದರ್ಭದಲ್ಲಿ ಅಂತಹ ಪ್ರತಿ ಕೆ.ಜಿ ಬಿತ್ತನೆ ಗೂಡಿಗೆ ಪ್ರಸ್ತುತ ರೂ.225/- ರಂತೆ ಬೋನಸ್ ನೀಡಲಾಗುವುದು ಹಾಗೂ ಉತ್ಪಾದಕತೆ ಆಧಾರದ ಮೇಲೆ ಪ್ರತಿ ಕೆ.ಜಿ ಬಿತ್ತನೆ ಗೂಡಿಗೆ ರೂ.120/- ಪ್ರೊತ್ಸಾಹಧನ ನೀಡಲಾಗುತ್ತಿದೆ. ಕಳೆದ 5 ವರ್ಷಗಳಲ್ಲಿ ಮೈಸೂರು ಬಿತ್ತನೆ ವಲಯದಲ್ಲಿ ವಿತರಿಸಿರುವ ಬೋನಸ್ ಹಾಗೂ ಪ್ರೋತ್ಸಾಹಧನದ ವಿವರಗಳು ಈ ಕೆಳಗಿನಂತಿವೆ.

| ಕ್ರಸ. | ವರ್ಷ | ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರು ಗಳಲ್ಲಿ) | ಕಟಾವು ಮಾಡಿದ ಮೊಟ್ಟೆಗಳು (ಲಕ್ಷಗಳಲ್ಲಿ) | ಉತ್ಪಾದಿಸಿದ ಗೂಡು (ಲಕ್ಷಗಳಲ್ಲಿ) | ಗೂಡಿನ ವಿಲೇವಾರಿ (ಲಕ್ಷಗಳಲ್ಲಿ) | | 100 ಮೊಟ್ಟೆಗಳ ಸರಾಸರಿ ಇಳುವರಿ ಸಂಖ್ಯೆಗಳಲ್ಲಿ | ಪಾವತಿಸಿದ ಬೋನಸ್ (ರೂ. ಲಕ್ಷಗಳಲ್ಲಿ) |
|---|---|---|---|---|---|---|---|---|
| | | | | | ಬಿತ್ತನೆಗೆ | ರೀಲಿಂಗ್ | | |
| 1 | 2018-19 | 1238.38 | 19.258 | 6887.26 | 3762.11 | 3125.15 | 35763 | 590.575 |
| 2 | 2019-20 | 1208.76 | 16.661 | 5565.80 | 3661.00 | 1904.80 | 33499 | 393.402 |
| 3 | 2020-21 | 1165.64 | 15.688 | 5498.42 | 2667.06 | 2831.36 | 34948 | 351.234 |
| 4 | 2021-22 | 1157.22 | 12.815 | 4477.70 | 2532.37 | 1945.33 | 34941 | 550.807 |
| 5 | 2022-23 | 1158.18 | 12.598 | 4485.18 | 2736.32 | 1748.86 | 35602 | 462.742 |

**ದ್ವಿತಳಿ ಬಿತ್ತನೆ ವಲಯ:**

ರಾಜ್ಯದ 31 ತಾಲ್ಲೂಕುಗಳಲ್ಲಿ ದ್ವಿತಳಿ ಬಿತ್ತನೆ ಗೂಡಿನ ಉತ್ಪಾದನೆ ಕೈಗೊಳ್ಳಲಾಗಿದೆ. ಬಹುಪಾಲು ತಾಲ್ಲೂಕುಗಳು ಪಶ್ಚಿಮಘಟ್ಟ ಪ್ರದೇಶದಲ್ಲಿವೆ. ಹಾಸನ, ಆನೇಕಲ್, ಕೆ.ಆರ್.ಪೇಟೆ, ಮತ್ತು ತುಮಕೂರು ಬಿತ್ತನೆ ಪ್ರದೇಶದಲ್ಲಿ ಅಧಿಕ ಪ್ರಮಾಣದಲ್ಲಿ ಬಿತ್ತನೆ ಗೂಡುಗಳು ಉತ್ಪಾದನೆಯಾಗುತ್ತಿವೆ. ಈ ಬಿತ್ತನೆ ಪ್ರದೇಶಗಳಲ್ಲಿ ಹೆಚ್ಚಾಗಿ ಸಿ.ಎಸ್.ಆರ್-2 ತಳಿಯ ಮೊಟ್ಟೆಗಳ ಸಾಕಾಣಿಕೆ ಮಾಡಲಾಗುತ್ತಿದೆ. ಕಳೆದ 5 ವರ್ಷಗಳ ಪ್ರಗತಿ ವರದಿ ಕೆಳಕಂಡಂತಿದೆ. ದ್ವಿತಳಿ ಬಿತ್ತನೆ ಪ್ರದೇಶದಲ್ಲೂ ಬಿತ್ತನೆಗೆ ಉತ್ಪಾದಿಸುವ ಗೂಡು ಬಿತ್ತನೆಗೆ ಯೋಗ್ಯವಾಗಿದ್ದು ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾದ ಸಂಧರ್ಭದಲ್ಲಿ ಪ್ರತಿ ಕೆ.ಜಿ. ಬಿತ್ತನೆ ಗೂಡಿಗೆ ಬೋನಸ್ ರೂ.225/- ನೀಡಲಾಗುತ್ತಿದೆ ಅಲ್ಲದೆ ಉತ್ಪಾದಕತೆ ಆಧರಿಸಿ ಪ್ರತಿ ಕೆ.ಜಿ.ಗೆ ರೂ.120/- ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

| ಕ್ರಸ. | ವರ್ಷ | ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರು ಗಳಲ್ಲಿ) | ಕಟಾವು ಮಾಡಿದ ಮೊಟ್ಟೆಗಳು (ಲಕ್ಷಗಳಲ್ಲಿ) | ಉತ್ಪಾದಿಸಿದ ಗೂಡು (ಲಕ್ಷಗಳಲ್ಲಿ) | ಗೂಡಿನ ವಿಲೇವಾರಿ (ಲಕ್ಷಗಳಲ್ಲಿ) | | 100 ಮೊಟ್ಟೆಗಳ ಸರಾಸರಿ ಇಳುವರಿ ಸಂಖ್ಯೆಗಳಲ್ಲಿ | ಪಾವತಿಸಿದ ಬೋನಸ್ (ರೂ. ಲಕ್ಷಗಳಲ್ಲಿ) |
|---|---|---|---|---|---|---|---|---|
| | | | | | ಬಿತ್ತನೆಗೆ | ರೀಲಿಂಗ್ | | |
| 1 | 2018-19 | 3146.85 | 8.602 | 3374.841 | 2021.523 | 1353.318 | 39232 | 218.245 |
| 2 | 2019-20 | 3188.72 | 7.650 | 2853.490 | 1912.940 | 940.556 | 37296 | 296.713 |
| 3 | 2020-21 | 4163.36 | 8.760 | 3140.758 | 1591.797 | 1548.960 | 35849 | 232.811 |
| 4 | 2021-22 | 3647.47 | 6.394 | 2256.190 | 1384.929 | 871.261 | 35284 | 251.990 |
| 5 | 2022-23 | 4018.35 | 6.941 | 2406.280 | 1592.450 | 813.830 | 34668 | 241.202 |